# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 782(869) |
| ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ . (ಪದವೀದರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಿಂದುಳಿದ ವರ್ಗಗಳ (OBC) ಕೆನೆಪದರ ಮೀಸಲಾತಿ ಸೌಲಭ್ಯ ಪಡೆಯಲು 2018 ರಲ್ಲಿ ರೂ.8 ಲಕ್ಷಗಳ ಆದಾಯ ಮಿತಿ ನಿಗದಿಪಡಿಸಲಾಗಿತ್ತು; ಕಳೆದ 8 ವರ್ಷಗಳಿಂದಲೂ ಆದಾಯ ಮಿತಿ ಪರಿಷ್ಕರಣೆ ಆಗಿಲ್ಲ; ಕೇಂದ್ರ ಸರ್ಕಾರ ಈಗ ವಾರ್ಷಿಕ 12.75 ಲಕ್ಷ ರೂವರೆಗೆ ಆದಾಯ ಹೊಂದಿರುವವರನ್ನು ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯಲು ಅರ್ಹರೆಂದು ಪರಿಗಣಿಸಿದೆ; | ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:36033/1/2013, ದಿನಾಂಕ: 13.09.2017 ರಿಂದ ಜಾರಿಗೆ ಬರುವಂತೆ, ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ ಪೋಷಕರ ವಾರ್ಷಿಕ ಆದಾಯ ಮಿತಿಯನ್ನು ರೂ.8.00 ಲಕ್ಷಕ್ಕೆ ನಿಗಧಿಗೊಳಿಸಲಾಗಿದೆ. ಸದರಿ ವಾರ್ಷಿಕ ಆದಾಯ ಮಿತಿ ಪ್ರಸ್ತುತ ಚಾಲ್ತಿಯಲ್ಲಿರುತ್ತದೆ.<br><br>ಅದರಂತೆ, ರಾಜ್ಯ ಸರ್ಕಾರವು ಸಹ ದಿನಾಂಕ:14-09-2018 ರಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಗಾಗಿ ಅಭ್ಯರ್ಥಿಯ ಮತ್ತು ಪೋಷಕರ ಒಟ್ಟು ವಾರ್ಷಿಕ ಆದಾಯದ ಮಿತಿಯನ್ನು ರೂ.8.00 ಲಕ್ಷಕ್ಕೆ ನಿಗಧಿಪಡಿಸಲಾಗಿರುತ್ತದೆ. |
| ಆ | ಈ ನೆಲೆಯಲ್ಲಿ ರಾಜ್ಯದಲ್ಲಿ OBC ಮೀಸಲಾತಿ ಸೌಲಭ್ಯ ಪಡೆಯಲು ಪ್ರಸ್ತುತ ನಿಗದಿಪಡಿಸಿರುವ ಅಭ್ಯರ್ಥಿ/ಪೋಷಕರ ಆದಾಯ ಮಿತಿಯನ್ನು ಕೆನೆಪದರ ಪರಿಷ್ಕರಿಸಲು ಸರ್ಕಾರ ಉದ್ದೇಶಿಸಿದೆಯೇ; ಈ ಕುರಿತು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ವಿವರಗಳನ್ನು ನೀಡುವುದು) | ಕೆನೆಪದರ ಮಿತಿಯನ್ನು ಪರಿಷ್ಕರಿಸಿ ವಾರ್ಷಿಕ ಆದಾಯ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

<table>
<tr>
<td>ಇ)</td>
<td>ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಸೌಲಭ್ಯ ಪಡೆಯಲು ಪ್ರವರ್ಗವಾರು ಪ್ರಸ್ತುತ ನಿಗದಿಪಡಿಸಲಾಗಿರುವ ಮೀಸಲಾತಿ ಪ್ರಮಾಣ ಎಷ್ಟು;<br>(ಪ್ರವರ್ಗವಾರು ಮಾಹಿತಿ ನೀಡುವುದು)</td>
<td>ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002 ರನ್ವಯ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಗಾಗಿ ಈ ಕೆಳಕಂಡಂತೆ ಮೀಸಲಾತಿ ಪ್ರಮಾಣ ನಿಗಧಿಪಡಿಸಲಾಗಿದೆ.
<table>
<tr><th>ಪ್ರವರ್ಗ</th><th>ಮೀಸಲಾತಿ ಪ್ರಮಾಣ ಶೇಖಡವಾರು</th></tr>
<tr><td>ಪ್ರವರ್ಗ-1</td><td>04</td></tr>
<tr><td>ಪ್ರವರ್ಗ-2ಎ</td><td>15</td></tr>
<tr><td>ಪ್ರವರ್ಗ-2ಬಿ</td><td>04</td></tr>
<tr><td>ಪ್ರವರ್ಗ-3ಎ</td><td>04</td></tr>
<tr><td>ಪ್ರವರ್ಗ-3ಬಿ</td><td>05</td></tr>
<tr><td>ಒಟ್ಟು</td><td>32</td></tr>
</table>
</td>
</tr>
<tr>
<td>ಈ)</td>
<td>ಹಾಗೆ ಪ್ರವರ್ಗವಾರು ಮೀಸಲಾತಿಯನ್ನು ನೀಡುವಾಗ ಅಳವಡಿಸಿಕೊಂಡಿರುವ ಕೆನೆಪದರ ನೀತಿ ಏನು; ಯಾರಿಗೆ ಅನ್ವಯಿಸಲಿದೆ; ಅಥವಾ ಅನ್ವಯಿಸುವುದಿಲ್ಲ? (ವಿವರವಾದ ಮಾಹಿತಿ ನೀಡುವುದು)</td>
<td>ಭಾರತದ ಸಂವಿಧಾನ ಅನುಚ್ಛೇಧ 15(4) ಮತ್ತು 16(4) ರನ್ವಯ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ, ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000,ದಿನಾಂಕ: 30.03.2002 ರ ಹೊಸ ಸಮಗ್ರ ಕೆನೆಪದರ ನೀತಿಯು ಈ ಕೆಳಕಂಡಂತಿದೆ.<br>1. ನೇರ ನೇಮಕಾತಿಗಳಲ್ಲಿ ಯಾವುದಾದರೂ ಹುದ್ದೆಗಳಿಗೆ ಅರ್ಹತೆಯಾಗಿ, ಕೆಳಗಿನ ಹುದ್ದೆಗಳಲ್ಲಿ ಇನ್ಯಾವುದೇ ಹುದ್ದೆಗಳಲ್ಲಿ ವೃತ್ತಿಯಲ್ಲಿ ಅಥವಾ ಉದ್ಯೋಗದಲ್ಲಿ ನಿರ್ದಿಷ್ಟ ಅವಧಿಯ ಅನುಭವವನ್ನು ನಿಯಮಿಸಿದ ಸಂದರ್ಭಗಳಲ್ಲಿ ಅಂತಹ ಹುದ್ದೆಗಳನ್ನು ತುಂಬುವಾಗ ಕೆನೆಪದರ ನಿಯಮವನ್ನು ಅನ್ವಯಿಸಬಾರದು.<br>2. ಈ ನಿಯಮ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವ ವ್ಯಕ್ತಿಗಳ ಮಕ್ಕಳಿಗೆ ಅನ್ವಯಿಸುತ್ತದೆ.<br>• ಭಾರತದ ರಾಷ್ಟ್ರಪತಿಗಳು<br>• ಭಾರತದ ಉಪರಾಷ್ಟ್ರಪತಿ<br>• ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಪುಟ ದರ್ಜೆಯ ಹುದ್ದೆಯನ್ನು ಹೊಂದಿರುವ ಎಲ್ಲರೂ</td>
</tr>
</table>

- ರಾಜ್ಯ ಸಭೆ ಹಾಗೂ ರಾಜ್ಯಗಳ ವಿಧಾನ ಪರಿಷತ್ತಿನ ಅಧ್ಯಕ್ಷರು
- ರಾಜ್ಯಪಾಲರುಗಳು
- ಲೋಕಸಭೆ ಹಾಗೂ ವಿಧಾನ ಸಭೆಗಳ ಸಭಾಪತಿಗಳು
- ಸರ್ವೋಚ್ಛ ಹಾಗೂ ಉಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳು
- ಲೋಕಸೇವಾ ಆಯೋಗದ ಅಧ್ಯಕ್ಷರು
- ಭಾರತದ ಮಹಾ ನ್ಯಾಯವಾದಿ ( Attorney General of India)
- ಅಡ್ವೋಕೇಟ್ ಜನರಲ್
- ಮುಖ್ಯ ಚುನಾವಣಾ ಆಯುಕ್ತರು
- ನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕ, ಭಾರತ ಸರ್ಕಾರ (Comptroller and Auditor General of India)
- ಕನಿಷ್ಠ 5 ವರ್ಷಗಳ ಅವಧಿಗೆ ಸಂಸತ್ತು ಸದಸ್ಯರಾಗಿರುವವರು- ಅವರ ಅಧಿಕಾರವಧಿಯಲ್ಲಿ
- ಕನಿಷ್ಠ 5 ವರ್ಷಗಳ ಅವಧಿಗೆ ರಾಜ್ಯಗಳ ಶಾಸನ ಸಭೆಯ ಸದಸ್ಯರಾಗಿರುವವರು- ಅವರ ಅಧಿಕಾರವಧಿಯಲ್ಲಿ.

ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ ಪೋಷಕರು, ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೇಯ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ ( ವೇತನ ಶ್ರೇಣಿ ರೂ.6000- 11200) (ಪ್ರಸ್ತುತ ವೇತನ ಶ್ರೇಣಿ ರೂ.69,250-1,34,200).

1. ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ ಪೋಷಕರ ಒಟ್ಟು ವಾರ್ಷಿಕ ಆದಾಯದ ರೂ. 2.00 ಲಕ್ಷ ಮೀರಿದ್ದರೆ (ಸರ್ಕಾರದ ಸಂಖ್ಯೆ: ಹಿಂವಕ 304 ಬಿಸಿಎ 2017, ದಿನಾಂಕ: 14.09.2018 ರಲ್ಲಿ ರೂ 6.00 ಲಕ್ಷದಿಂದ ರೂ. 8.00 ಲಕ್ಷಗಳಿಗೆ ನಿಗಧಿಗೊಳಿಸಲಾಗಿರುತ್ತದೆ.

| | | |
|---|---|---|
| | | 2. ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ ಪೋಷಕರ ಸೇರಿದಂತೆ ಕರ್ನಾಟಕ ಭೂ ಸುಧಾರಣಾ ಕಾಯಿದೆ 1961 ರಡಿಯಲ್ಲಿ ನಿಗಧಿಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ, ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು. |

ಸಂಖ್ಯೆ: ಹಿಂವಕ 275 ಬಿಸಿಐ 2026

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು